ವಿಶ್ವವಾಣಿ
ವಿಶ್ವಾಸವೇ ವಿಶ್ವ

## ₹2.10 ಲಕ್ಷ ಕೋಟಿ

- ಜಿಎಸ್‌ಟಿ ಸಂಗ್ರಹದಲ್ಲಿ ಸಾರ್ವಕಾಲಿಕ ದಾಖಲೆ
- ಇದೇ ಮೊದಲ ಬಾರಿಗೆ 2 ಲಕ್ಷ ಕೋಟಿ ಮೀರಿ ಗಳಿಕೆ

ಟಾಪ್ 3


| | |
|---|---|
| ಮಹಾರಾಷ್ಟ್ರ | 37,671 ಕೋಟಿ |
| ಕರ್ನಾಟಕ | 15,978 ಕೋಟಿ |
| ಗುಜರಾತ್ | 13,301 ಕೋಟಿ |

2024ರ ಏಪ್ರಿಲ್ - 2.10 ಲ.ಕೋ.
2023ರ ಏಪ್ರಿಲ್ - 1.87 ಲ.ಕೋ.
ಒಟ್ಟಾರೆ ಏರಿಕೆ - ಶೇ.12.4

ಪುಟ ತೆರೆದಂತೆ...



ಇದು ಬೆಳೆದ ಮಗಳನ್ನಿಟ್ಟುಕೊಂಡ ಎಲ್ಲ ತಾಯಂದಿರ ಸಮಸ್ಯೆ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6



ಮೂಲೆಗುಂಪಾಗುತ್ತಿದೆ ಕೆಂಪು ಉಗ್ರವಾದ
ಚರ್ಚಾವೇದಿಕೆ
ಗಣೇಶ್ ಭಟ್ ವಾರಾಣಸಿ
ಸಂ.ಗಮ | 7

## ಭಾರತ ಮತ ಮಹಾ ಸಮರ

- 28 ಸ್ಥಾನ ಗೆಲ್ಲುವ ಮೂಲಕ ಕಾಂಗ್ರೆಸ್‌ಗೆ ಪಾಠ ಕಲಿಸಿ: ಅಮಿತ್ ಶಾ
- ಈ ಬಾರಿ ಮೋದಿ ತೊಲಗಿಸಿ ದೇಶ ಉಳಿಸಿ: ಮಲ್ಲಿಕಾರ್ಜುನ ಖರ್ಗೆ
- ಮೋದಿ ಸತ್ತರೆ ಯಾರೂ ಪ್ರಧಾನಿ ಆಗುವುದೇ ಇಲ್ವೇ?: ರಾಜು ಕಾಗೆ
- ಮೋದಿ ಪ್ರಧಾನಿಯಾಗಲು ಜನರಿಂದ ತೀರ್ಮಾನ: ಬಿ. ವೈ. ವಿಜಯೇಂದ್ರ

### ದಾರಿದೀಪೋಕ್ತಿ

ಯಾವುದೇ ಸನ್ನಿವೇಶ ಅಥವಾ ಜನರ ಬಗ್ಗೆ ಕೋಪಿಸಿಕೊಳ್ಳುವಾಗ ಯೋಚಿಸಬೇಕು. ಕಾರಣ ಅವೆರಡೂ ನಿಮ್ಮ ಪ್ರತಿಕ್ರಿಯೆಯಿಲ್ಲದೇ ಏನೂ ಇಲ್ಲ. ನೀವು ಯಾವ ರೀತಿ ಪ್ರತಿಕ್ರಿಯಿಸುತ್ತೀರಿ ಎಂಬುದರ ಮೇಲೆ ಅದು ಮಹತ್ವವನ್ನು ಪಡೆಯುತ್ತವೆ.

### ವಕ್ರತುಂಡೋಕ್ತಿ

ನಿಮ್ಮ ಕೆಲವು ತಪ್ಪು ನಡೆಗಳು ಸರಿ ಎಂದೆನಿಸಿದರೆ ನೀವು ಚೆಸ್ ಆಡಬಹುದು.

## ಇಂದು ಶಿವಮೊಗ್ಗಕ್ಕೆ ರಾಹುಲ್ ಗಾಂಧಿ

**ಬೆಂಗಳೂರು:** 2ನೇ ಹಂತದ ಮತದಾನಕ್ಕೆ ಕೆಲವೇ ದಿನ ಬಾಕಿಯಿರುವಾಗ ಮಾಜಿ ಸಿಎಂ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರ ತವರು ಕ್ಷೇತ್ರಕ್ಕೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಗುರುವಾರ ಮತಬೇಟೆಯಾಡಲಿದ್ದಾರೆ.

ಉತ್ತರ ಕನ್ನಡ, ದಾವಣಗೆರೆ, ಶಿವಮೊಗ್ಗ ಸೇರಿ ಹಲವು ಕ್ಷೇತ್ರಗಳ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

## ಸಲ್ಮಾನ್ ಮನೆ ದಾಳಿ ಆರೋಪಿ ಆತ್ಮಹತ್ಯೆ

**ಮುಂಬಯಿ:** ಬಾಲಿವುಡ್ ನಟ ಸಲ್ಮಾನ್ ಖಾನ್ ನಿವಾಸದ ಮೇಲೆ ಗುಂಡಿನ ದಾಳಿ ನಡೆಸಿ ಪೊಲೀಸರಿಂದ ಬಂಧಿತನಾಗಿದ್ದ ಅನುಜ್ ತಾಪನ್ ಎಂಬಾತ ಜೈಲಿನಲ್ಲೇ ನೇಣು ಬಿಗಿದುಕೊಂಡು ಸತ್ತಿದ್ದಾನೆ. ಬುಧವಾರ ಬೆಳಗ್ಗೆ ಬೆಡ್‌ಶೀಟ್‌ನಿಂದ ನೇಣು ಹಾಕಿಕೊಂಡಿದ್ದು, ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಮೃತನಾಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಕಾಂಗ್ರೆಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ

## ಪ್ರಚಾರದಿಂದ ಕೆಸಿಆರ್ ಬ್ಯಾನ್



**ದೆಹಲಿ:** ಕಾಂಗ್ರೆಸ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಆರೋಪದ ಮೇಲೆ ತೆಲಂಗಾಣ ಮಾಜಿ ಸಿಎಂ ಕೆ.ಚಂದ್ರಶೇಖರರಾವ್‌ಗೆ ಕೇಂದ್ರ ಚುನಾವಣಾ ಆಯೋಗ ಬಿಸಿ ಮುಟ್ಟಿಸಿದ್ದು, 48 ಗಂಟೆಗಳ ಕಾಲ ಚುನಾವಣಾ ಪ್ರಚಾರದಿಂದ ನಿಷೇಧಿಸಿದೆ. ಏ.6ರಂದು ಕಾಂಗ್ರೆಸ್ ಕೆಸಿಆರ್ ವಿರುದ್ಧ ದೂರು ನೀಡಿತ್ತು.

### ಫನ್‌ತರಂಗ

- ರಘುಪತಿ ಶೃಂಗೇರಿ -

ಪತಂಜಲಿಯ 15 ಉತ್ಪನ್ನಗಳಿಗೆ ಲೈಸೆನ್ಸ್ ರದ್ದು
ಸುದ್ದಿ






# ರಾಜ್ಯದ ಆರು ಜಿಲ್ಲೆಗಳಿಗೆ ರೆಡ್ ಅಲರ್ಟ್ ಬಿಸಿ

ಮುಂದಿನ ಐದು ದಿನ 18 ಜಿಲ್ಲೆಗಳಿಗೆ ಬಿಸಿಗಾಳಿಯ ಎಚ್ಚರಿಕೆ

ಕಲಬುರಗಿ ದಾಖಲೆಯ 47.7 ಡಿಗ್ರಿ ತಾಪಮಾನ ದಾಖಲು

| | |
|---|---|
| ರೆಡ್ ಅಲರ್ಟ್ | ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ |
| ಆರೆಂಜ್ ಅಲರ್ಟ್ | ಕರಬುರಗಿ, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ತುಮಕೂರು, ಯಾದಗಿರಿ. |
| ಯೆಲ್ಲೋ ಅಲರ್ಟ್ | ಬಳ್ಳಾರಿ, ವಿಜಯಪುರ, ರಾಯಚೂರು, ದಾವಣಗೆರೆ |

**ಬೆಂಗಳೂರು:** ಭೀಕರ ಬರಗಾಲದ ಬಳಿಕ ರಾಜ್ಯದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ತೀವ್ರವಾಗಿ ಏರಿಕೆಯಾಗುತ್ತಿರುವುದು ಜನರ ಆತಂಕಕ್ಕೆ ಕಾರಣವಾಗಿದೆ. ಈ ನಡುವೆ ಮುಂದಿನ ಐದು ದಿನಗಳ ಕಾಲ ರಾಜ್ಯದ 18 ಜಿಲ್ಲೆಗಳಲ್ಲಿ ಬಿಸಿಗಾಳಿಯ ಎಚ್ಚರಿಕೆ ನೀಡಿದೆ.

ಹವಾಮಾನ ಇಲಾಖೆ ಈ ಬಗ್ಗೆ ಎಚ್ಚರಿಕೆ ನೀಡಿದ್ದು, ಐದು ದಿನಗಳ ಕಾಲ 18 ಜಿಲ್ಲೆಗಳಿಗೆ ಬಿಸಿಗಾಳಿ ಹಾಗೂ ಆರು ಜಿಲ್ಲೆಗಳಿಗೆ ರೆಡ್ ಅಲರ್ಟ್‌ಅನ್ನು ಘೋಷಿಸಲಾಗಿದೆ. ಸಾಮಾನ್ಯವಾಗಿ ಪ್ರತಿವರ್ಷ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗದಲ್ಲಿ ಏಪ್ರಿಲ್‌ನಲ್ಲಿ ಮಳೆಯಾಗುತ್ತಿತ್ತು. ಆದರೆ ಈ ಬಾರಿ ಏಪ್ರಿಲ್ ತಿಂಗಳಿನಾದ್ಯಂತ ಒಣಹವೆ ಮುಂದುವರೆದಿದೆ.

- ಉತ್ತರ ಕರ್ನಾಟಕ ಭಾಗದಲ್ಲಿ 40 ಡಿಗ್ರಿ ದಾಟಿದ ತಾಪಮಾನ
- ಬೆಂಗಳೂರು ಸೇರಿದಂತೆ ಮಲೆನಾಡ ಭಾಗದ ಎಲ್ಲಿಯೂ ಮಳೆಯ ಸಾಧ್ಯತೆಯಿಲ್ಲ
- ನಾಲ್ಕು ದಶಕದ ಬಳಿಕ ಬೆಂಗಳೂರಿನಲ್ಲಿ ಏಪ್ರಿಲ್ ತಿಂಗಳಲ್ಲಿ ಶೂನ್ಯ ಮಳೆ ದಾಖಲು
- ಕಲ್ಯಾಣ ಕರ್ನಾಟಕ ಭಾಗದಲ್ಲಿ ಕನಿಷ್ಠ 43 ಡಿಗ್ರಿಗೆ ಬಂದಿರುವ ತಾಪಮಾನ



ವರ್ಣರಂಜಿತ ಪ್ಯಾರಾಸೋಲ್‌ಗಳ ಬದಲು ಉತ್ತಮ ಹಳೆಯ ಕಪ್ಪು ಛತ್ರಿಗಳನ್ನು ಬಳಸಿ. ಕೊಡೆಯ ಬಣ್ಣ ಶಾಖವನ್ನು ನಿರ್ವಹಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಕಪ್ಪು ಛತ್ರಿಗಳು ಸೂರ್ಯನ ಬೆಳಕು ಮತ್ತು ಶಾಖವನ್ನು ಹೀರಿಕೊಳ್ಳುತ್ತವೆ, ತರುವಾಯ ಅತಿಗೆಂಪು ವಿಕಿರಣವನ್ನು ಹೊರಸೂಸುತ್ತವೆ ಮತ್ತು ಹಾನಿಕಾರಕ ಯುವಿ ಕಿರಣಗಳು ದೇಹವನ್ನು ತಲುಪದಂತೆ ತಡೆಯುವ ತಡೆಗೋಡೆಯನ್ನು ಸೃಷ್ಟಿಸುತ್ತವೆ.

- ಎ ಪ್ರಸಾದ್, ಭಾರತೀಯ ಹವಾಮಾನ ಇಲಾಖೆ ವಿಜ್ಞಾನಿ

ರೇವಣ್ಣ ಮನೆಯಲ್ಲಿ ಹೋಮ ಹವನ | ನಾಳೆ ಪ್ರಜ್ವಲ್ ವಾಪಸು | ವಿಚಾರಣೆಗೆ ಅಪ್ಪ-ಮಗ ಹಾಜರು ಸಾಧ್ಯತೆ

# ದೇವರ ಮೊರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಿನದಿಂದ ದಿನಕ್ಕೆ ಪ್ರಜ್ವಲ್ ರೇವಣ್ಣ ಖಾಸಗಿ ಕ್ಷಣದ ವಿಡಿಯೊದ ಬಿಸಿ ರೇವಣ್ಣ ಕುಟುಂಬಕ್ಕೆ ಮುಟ್ಟುತ್ತಿದೆ. ಒಂದೆಡೆ ವಿಡಿಯೊ ಬಿಸಿಯಿಂದ ರಕ್ಷಿಸುವಂತೆ ರೇವಣ್ಣ ಕುಟುಂಬ ದೇವರ ಮೊರೆ ಹೋಗಿದ್ದರೆ, ಇತ್ತ ಪ್ರಜ್ವಲ್ ರೇವಣ್ಣ ಶೀಘ್ರದಲ್ಲಿಯೇ ವಿಚಾರಣೆಗೆ ಹಾಜರಾಗುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಎಲ್ಲದರ ನಡುವೆ ಪ್ರಜ್ವಲ್ ರೇವಣ್ಣ ಅವರನ್ನು ಮುಂದಿಟ್ಟುಕೊಂಡು ಎನ್‌ಡಿಎಯನ್ನು ಇಕ್ಕಟ್ಟಿಗೆ ಸಿಲುಕಿಸಬೇಕು ಎನ್ನುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ಬಿಜೆಪಿ ತಿರುಗೇಟು ನೀಡಲು ಮುಂದಾಗಿದ್ದು, ಅಮಿತ್ ಶಾ ಸೇರಿದಂತೆ ಬಹುತೇಕ ನಾಯಕರು ಪ್ರಜ್ವಲ್ ರೇವಣ್ಣ ಅವರನ್ನು ಗೆಲ್ಲಿಸಿದ್ದು ಕಾಂಗ್ರೆಸ್, ಮೊದಲ ಹಂತದ ಮತದಾನ ಮುಗಿದ ಬಳಿಕವೇ ಈ ವಿಡಿಯೊ ರಿಲೀಸ್ ಆಗಲು ಕಾರಣವೇನು? ಒಕ್ಕಲಿಗರ ಮತ ತಪ್ಪದಂತೆ ನೋಡಿಕೊಳ್ಳಲು ಕಾಂಗ್ರೆಸ್ ಮಾಡಿರುವ 'ಕುತಂತ್ರ' ಎನ್ನುವ ಟೀಕಾಪ್ರಹಾರವನ್ನು ಮುಂದುವರೆಸಿದ್ದಾರೆ.

ಈ ಎಲ್ಲ ರಾಜಕೀಯ ಹೈಡ್ರಾಮ ನಡುವೆ ಎಸ್‌ಐಟಿ ಅಧಿಕಾರಿಗಳು ಮಾಜಿ ಸಚಿವ ರೇವಣ್ಣ ಅವರ ನಿವಾಸಕ್ಕೆ ಭೇಟಿ ನೀಡಿ, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದು, ತಕ್ಷಣ ವಿಚಾರಣೆಗೆ ಹಾಜರಾಗದಿದ್ದರೆ ಕಾನೂನು ಕ್ರಮಕ್ಕೆಗೊಳ್ಳುವುದಾಗಿಯೂ ಎಸ್‌ಐಟಿ ಎಚ್ಚರಿಕೆ ನೀಡಿದೆ. ಆದರೆ ಎಸ್‌ಐಟಿ ಅಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಅಪ್ಪ-ಮಗ ಮನೆಯಲ್ಲಿ ಇಲ್ಲದೇ ಇರುವುದರಿಂದ ಹೊಳೆನರಸೀಪುರದ ಮನೆ ಬಾಗಿಲಿಗೆ ನೋಟಿಸ್ ಅನ್ನು ಅಂಟಿಸಿ ವಾಪಸಾಗಿದ್ದಾರೆ.

**ಸ್ಥಳ ಮಹಜರು:** ಹೊಳೆನರಸೀಪುರದಲ್ಲಿರುವ ಎಸ್‌ಐಟಿ ಅಧಿಕಾರಿಗಳು ದೂರು ನೀಡಿದ್ದ ಸಂತ್ರಸ್ತ ಮಹಿಳೆಯ ಸಮ್ಮುಖದಲ್ಲಿ ಸ್ಥಳ ಮಹಜರ್ ನಡೆಸಲಿದ್ದಾರೆ. ಹೊಳೆನರಸೀಪುರದ ರೇವಣ್ಣ ನಿವಾಸದಲ್ಲಿಯೂ ಮಹಜರು ನಡೆಸಲು ಮುಂದಾಗಿದ್ದಾರೆ. ತಾನು ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ರೇವಣ್ಣ ಲೈಂಗಿಕ ಕಿರುಕುಳ ನೀಡಿದ್ದಾಗಿ ಮಹಿಳೆ ದೂರು ನೀಡಿದ್ದರು. ಬುಧವಾರ ಖುದ್ದು ಮಹಿಳೆ ಸಮ್ಮುಖದಲ್ಲಿ ಸ್ಥಳ ಮಹಜರು ಮಾಡಲು ಮುಂದಾಗಿದ್ದಾರೆ.



- ವಿಚಾರಣೆಗೆ ಹಾಜರಾಗುವಂತೆ ರೇವಣ್ಣ, ಪ್ರಜ್ವಲ್‌ಗೆ ಎಸ್‌ಐಟಿಯಿಂದ ನೋಟಿಸ್
- ಮೇ.3ರ ತಡರಾತ್ರಿ ಬೆಂಗಳೂರಿಗೆ ಜರ್ಮನಿಯಿಂದ ವಾಪಸಾಗಲಿರುವ ಪ್ರಜ್ವಲ್
- ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದುಗೊಳಿಸಲು ಸಿಎಂ ಮನವಿ
- ಸಂಕಷ್ಟದಿಂದ ಹೊರತರಲು ದೇವರ ಹೊರೆ ಹೋದ ಮಾಜಿ ಸಚಿವ ರೇವಣ್ಣ
- ಲೈಂಗಿಕ ಪ್ರಕರಣದ ವಿಚಾರಣೆಗೆ ತಡೆ ನೀಡಲು ಹೈಕೋರ್ಟ್ ಮೊರೆ ಸಾಧ್ಯತೆ

### ಹೋಮ - ಹವನ - ಪೂಜೆ

ಈ ನಡುವೆ ತಮಗೆ ಹಾಗೂ ಪುತ್ರನಿಗೆ ಬಂದಿರುವ ಈ ಸಂಕಷ್ಟದಿಂದ ದೂರ ಮಾಡುವಂತೆ ದೇವರ ಮೊರೆ ಹೋಗಿರುವ ಮಾಜಿ ಸಚಿವ ರೇವಣ್ಣ ಬುಧವಾರ ಬೆಳಗ್ಗಿಯಿಂದಲೇ ಹೋಮ- ಹವನದಲ್ಲಿ ನಿರತರಾಗಿದ್ದಾರೆ. ಹೊಳೆನರಸೀಪುರದ ವಿವಿಧ ದೇವಾಲಯಗಳಿಗೂ ಭೇಟಿ ನೀಡಿ ಪೂಜೆ ಸಲ್ಲಿಸಿದ್ದಾರೆ. ಮೇ 3ಕ್ಕೆ ಪ್ರಜ್ವಲ್ ಬೆಂಗಳೂರಿಗೆ ವಾಪಸಾಗಲಿದ್ದು, ಮೇ 4ರಂದು ಎಸ್‌ಐಟಿ ಅಧಿಕಾರಿಗಳ ಮುಂದೆ ಅಪ್ಪ-ಮಗ ಒಟ್ಟಿಗೆ ಎಸ್‌ಐಟಿ ಮುಂದೆ ಹಾಜರಾಗುವ ಸಾಧ್ಯತೆಯಿದೆ.

### ಸಮಯ ಕೇಳಿದ ಪ್ರಜ್ವಲ್

ತಲೆಮರೆಸಿಕೊಂಡಿರುವ ಪ್ರಜ್ವಲ್, ವಿಶೇಷ ತನಿಖಾ ತಂಡದ ಮುಂದೆ ಹಾಜರಾಗಲು ಏಳು ದಿನದ ಕಾಲಾವಕಾಶ ಕೇಳಿರುವುದಾಗಿ ಮಾಹಿತಿ ನೀಡಿದ್ದಾರೆ. ಎಸ್‌ಐಟಿ ನೀಡಿರುವ ನೋಟಿಸ್‌ಗೆ ಪ್ರತಿಯಾಗಿ ಸಿಐಡಿ ಮುಖ್ಯಸ್ಥರಿಗೆ ಪ್ರಜ್ವಲ್ ರೇವಣ್ಣ ಪರ ವಕೀಲರು ಪತ್ರ ಬರೆದಿದ್ದಾರೆ. ಈ ಪತ್ರವನ್ನು ಪ್ರಜ್ವಲ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. 'ವಿಚಾರಣೆಗೆ ಹಾಜರಾಗಲು ನಾನು ಬೆಂಗಳೂರಿನಲ್ಲಿ ಇಲ್ಲದ ಕಾರಣ, ನನ್ನ ವಕೀಲರ ಮೂಲಕ ಸಿಐಡಿ ಬೆಂಗಳೂರಿಗೆ ಮನವಿ ಮಾಡಿದ್ದೇನೆ. ಸತ್ಯ ಆದಷ್ಟು ಬೇಗ ಹೊರಬರಲಿದೆ' ಎಂದು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

ಸಾಕ್ಷಿ ಪುರಾವೆಗಳನ್ನು ನೋಡದೆ ಏಕಾಏಕಿ ರೇವಣ್ಣ ಅಥವಾ ಯಾರನ್ನೇ ಆಗಲಿ ಬಂಧಿಸುವುದಿಲ್ಲ. ಅಮಿತ್ ಶಾ ಅವರು ರಾಜ್ಯ ಸರಕಾರ ಕ್ರಮಕ್ಕೆಗೊಳ್ಳುತ್ತಿಲ್ಲ ಎಂದು ಹೇಳಿದ್ದಾರೆ. ಆ ರೀತಿ ಏಕಾಏಕಿ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲ. ಇದೊಂದು ಸೂಕ್ಷ್ಮ ಪ್ರಕರಣವಾಗಿದ್ದು ಸರಕಾರ ಗಂಭೀರವಾಗಿ ಪರಿಗಣಿಸಿದೆ, ಎಚ್ಚರಿಕೆಯಿಂದ ಕ್ರಮಗಳನ್ನು ಕೈಗೊಳ್ಳುತ್ತಿದೆ.

-ಡಾ.ಜಿ. ಪರಮೇಶ್ವರ್, ಗೃಹ ಸಚಿವ

### ಪ್ರಧಾನಿ ಮೋದಿಗೆ ಪತ್ರ ಬರೆದ ಮುಖ್ಯಮಂತ್ರಿ

ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗಿದ್ದು, ವಾಪಸು ಕರೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದಿದ್ದಾರೆ. ಪ್ರಜ್ವಲ್ ರೇವಣ್ಣ ಏ. 27ರಂದು ದೇಶ ಬಿಟ್ಟು ವಿದೇಶಕ್ಕೆ ಹೋಗಿದ್ದಾರೆ. ಅವರು ದೇಶದ ರಾಜತಾಂತ್ರಿಕ ಪಾಸ್‌ಪೋರ್ಟ್‌ನಲ್ಲಿ ವಿದೇಶ ಪ್ರವಾಸ ಮಾಡುತ್ತಿದ್ದಾರೆ. ಆದ್ದರಿಂದ ಕೂಡಲೇ ಪಾಸ್‌ಪೋರ್ಟ್ ರದ್ದುಗೊಳಿಸಬೇಕು. ಗಂಭೀರ ಆರೋಪ ಹೊತ್ತು ವಿದೇಶಕ್ಕೆ ಪರಾರಿಯಾಗಿರುವ ಪ್ರಜ್ವಲ್ ಅವರನ್ನು ದೇಶಕ್ಕೆ ಕರೆತರಬೇಕು. ಈ ಸಂಬಂಧ ವಿದೇಶಾಂಗ ಸಚಿವಾಲಯದ ಮಧ್ಯಪ್ರವೇಶಿಸಬೇಕು. ಅವರ ಪಾಸ್‌ಪೋರ್ಟ್ ಮುಟ್ಟುಗೋಲು ಹಾಕಿಕೊಳ್ಳುವಂತೆ ಆಗ್ರಹಿಸಿದ್ದಾರೆ. ವಿದೇಶಾಂಗ ಇಲಾಖೆ, ಗೃಹ ಇಲಾಖೆ ಮೂಲಕ ಕ್ರಮಕ್ಕೆ ಆಗ್ರಹಿಸಿರುವ ಸಿಎಂ ಸಿದ್ದರಾಮಯ್ಯ, ಇಂಟರ್‌ಪೋಲ್ ನೆರವು ಪಡೆಯಬೇಕು ಎಂದು ಆಗ್ರಹಿದ್ದಾರೆ.

ಮೊಬೈಲ್ ಕಳುವಿನ ದೂರು ದಾಖಲಿಸಿದ್ದ ಸಂಸದ ಮಾಜಿ ಚಾಲಕನೇ ಮೊಬೈಲ್ ಕದ್ದದ್ದು ಎಂದು ತಿಳಿಯುತ್ತಿದ್ದಂತೆ ನ್ಯಾಯಾಲಯದ ಮೊರೆ

# ಮೊಬೈಲ್ ಕಳ್ಕೊಂಡು ತಗ್ಲಾಕ್ಕೊಂಡ ಪ್ರಜ್ವಲ್!

**ಬೆಂಗಳೂರು:** ರಾಜ್ಯಾದ್ಯಂತ ವಿವಾದದ ಅಲೆ ಎಬ್ಬಿಸಿ, ಎನ್‌ಡಿಎ ಮೈತ್ರಿ ನಾಯಕರು ಇಕ್ಕಟ್ಟಿಗೆ ಸಿಲುಕಿಸುವಂತೆ ಮಾಡಿರುವ ಸಂಸದ ಪ್ರಜ್ವಲ್ ರೇವಣ್ಣ ಅವರ ವಿಡಿಯೊ ಪ್ರಕರಣ ಬೆಳಕಿಗೆ ಬಂದಿರುವುದು ಹೇಗೆ ಎನ್ನುವ ಕುತೂಹಲ ಅನೇಕರಲ್ಲಿದೆ. ಆದರೆ ಸಹಸ್ರ ಲೆಕ್ಕದ ವಿಡಿಯೊಗಳು ಸದ್ದು ಮಾಡಲು ಪ್ರಜ್ವಲ್ ರೇವಣ್ಣ ಮೊಬೈಲ್ ಕಳೆದುಕೊಂಡಿದ್ದೇ ಕಾರಣ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಹೌದು, ಲೈಂಗಿಕ ಕಿರುಕುಳ ಹಾಗೂ ಮಹಿಳೆಯರೊಂದಿಗೆ ಕಳೆಯುತ್ತಿರುವ ಖಾಸಗಿ ವಿಡಿಯೊಗಳು ಬಹಿರಂಗವಾಗಿ 10 ದಿನ ಕಳೆದಿರಬಹುದು. ಆದರೆ ಈ ವಿಡಿಯೊಗಳು ಪ್ರಜ್ವಲ್ ಕೈಯಿಂದ ಮತ್ತೊಬ್ಬರ ಕೈಗೆ ಸೇರಿಯೇ ಏಳೆಂಟು ತಿಂಗಳು ಕಳೆದಿವೆ. ಆದರೆ ವಿಡಿಯೊ ಪಡೆದವರು, ಇಷ್ಟು ದಿನ ಸುಮ್ಮನಿದ್ದು ಚುನಾವಣಾ ಸಮಯದಲ್ಲಿಯೇ ಬಿಡುಗಡೆಗೊಳಿಸಿದ್ದೇಕೆ ಎನ್ನುವುದು ಅನೇಕರಲ್ಲಿರುವ ಕುತೂಹಲವಾಗಿದೆ.

ಮೂಲಗಳ ಪ್ರಕಾರ ಏಳೆಂಟು ತಿಂಗಳ ಹಿಂದೆಯೇ ಸಂಸದ ಪ್ರಜ್ವಲ್ ರೇವಣ್ಣ ಅವರ ಮೊಬೈಲ್ ಕಳುವಾಗಿತ್ತು. ಈ ಮೊಬೈಲ್‌ನಲ್ಲಿಯೇ ತಮ್ಮೆಲ್ಲ ಖಾಸಗಿ ಕ್ಷಣವನ್ನು 'ಸೇವ್' ಮಾಡಿದ್ದ ಪ್ರಜ್ವಲ್ ರೇವಣ್ಣ, ಆರಂಭದಲ್ಲಿ ಮೊಬೈಲ್ ಕಳುವನ್ನು ಲಘುವಾಗಿ ಪರಿಗಣಿಸಿದ್ದರು. ಆದರೆ ಮೊಬೈಲ್ ಕಳುವು ಮಾಡುವುದಕ್ಕೆ ವಿಡಿಯೊಗಳೇ ಪ್ರೇರಣೆ ಎನ್ನುವುದನ್ನು ಅರಿಯುತ್ತಿದ್ದಂತೆ, ಕ್ರಮಕ್ಕೆ ಮುಂದಾಗಿದ್ದಾರೆ. ಆದರೆ ಆ ವೇಳೆಗಾಗಲೇ, ಒಬ್ಬರ ಕೈಯಿಂದ ಹಲವರ ಕೈಗೆ ವಿಡಿಯೊ ತಲುಪಿದ್ದರಿಂದ ಇಂದು 'ಇಕ್ಕಟ್ಟ'ಗೆ ಸಿಲುಕುವಂತಹ ಸ್ಥಿತಿ ನಿರ್ಮಾಣವಾಗಿದೆ.

**ಚಾಲಕನಿಂದಲೇ ಮೊಬೈಲ್ ಕಳವು:** ಆರಂಭದಲ್ಲಿ ತಮ್ಮ ಮೊಬೈಲ್ ಕಳವಾಗಿದೆ ಎಂದು ದೂರು ನೀಡಿ, ಹೊಸ ಮೊಬೈಲ್ ಅನ್ನು ಪ್ರಜ್ವಲ್ ಖರೀದಿಸಿದ್ದರು. ಆದರೆ ಕೆಲ ದಿನಗಳ ಬಳಿಕ, ತಮ್ಮ ಕಾರು ಚಾಲಕ ಕೆಲಸ ಬಿಟ್ಟಿರುವುದು, ಮೊಬೈಲ್ ಕಳುವಾಗಿರುವುದಕ್ಕೂ 'ಲಿಂಕ್' ಇದೆ ಎನ್ನುವುದು ತಡವಾಗಿ ಬೆಳಕಿಗೆ ಬಂದಿದೆ.

ಈ ವಿಷಯ ಬೆಳಕಿಗೆ ಬರುತ್ತಿದ್ದಂತೆ ತಮ್ಮ ಮೊಬೈಲ್‌ನ ದತ್ತಾಂಶ ಲೀಕ್ ಆಗದಂತೆ ಪ್ರಜ್ವಲ್ ಹಲವು ರೀತಿ ಪ್ರಯತ್ನ ಪಟ್ಟಿದ್ದಾರೆ. ಆದರೆ ಆ ವೇಳೆಗಾಗಲೇ ಮಾಜಿ ಚಾಲಕ ಕಾರ್ತಿಕ್ ಪ್ರಜ್ವಲ್ ಮೊಬೈಲ್‌ನ ವಿಡಿಯೊಗಳನ್ನು ಮತ್ತೊಂದು ಸಿಸ್ಟಂಗೆ ವರ್ಗಾಯಿಸಿ ಕೊಂಡಿದ್ದಾರೆ. ವಿಡಿಯೊ ಬಿಡುಗಡೆ ಮಾಡುವ ಮೊದಲೇ, ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರಿಂದ ಇಷ್ಟು ದಿನ ಮುಚ್ಚಿಡಲಾಗಿತ್ತು. ಲೋಕಸಭಾ ಚುನಾವಣೆ ಸಮಯದಲ್ಲಿ, ಈ ವಿಡಿಯೊಗಳನ್ನು ಗಮನದಲ್ಲಿರಿಸಿಕೊಂಡೇ ಹಾಸನದ ಬಿಜೆಪಿ ಮುಖಂಡ ದೇವರಾಜೇಗೌಡ ಟಿಕೆಟ್ ನೀಡದಂತೆ ಮನವಿ ಮಾಡಿದ್ದರು. ಆದರೆ ಟಿಕೆಟ್ ಪ್ರಜ್ವಲ್‌ಗೆ ಸಿಕ್ಕಿದ್ದರಿಂದ, ಪ್ರಬಲರ ನೆರವಿನೊಂದಿಗೆ ಹಾಸನದ ಸ್ಥಳೀಯ ನಾಯಕರು ವಿಡಿಯೊ ಹರಿಬಿಟ್ಟಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

### ದೂರು ದಾಖಲು


ಆರಂಭದಲ್ಲಿ ಮೊಬೈಲ್ ಕಳವಾಗಿರುವುದು ಕಾಕತಾಳೀಯ ಎಂದು ಕೊಂಡಿದ್ದ ಪ್ರಜ್ವಲ್ ರೇವಣ್ಣ, ಮೊಬೈಲ್ ಕಳವಾಗಿರುವ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರನ್ನು ಮಾತ್ರ ದಾಖಲಿಸಿದ್ದರು. ಆರಂಭದಲ್ಲಿ ಇದು ಅಚಾನಕ್ ಆಗಿ ನಡೆದಿರುವ ಘಟನೆ ಎಂದು ಕೊಂಡಿದ್ದ ಪ್ರಜ್ವಲ್ ಅವರಿಗೆ ಅಂತಿಮವಾಗಿ, ಮೊಬೈಲ್‌ನಲ್ಲಿರುವ ಖಾಸಗಿ ವಿಷಯಗಳನ್ನು ಪಡೆಯುವುದಕ್ಕಾಗಿಯೇ 'ಕಳವು' ಮಾಡಿರುವುದು ಖಚಿತವಾಗುತ್ತಿದ್ದಂತೆ ತಮ್ಮ ವಿರುದ್ಧ ಯಾವುದೇ ವಿಡಿಯೊ, ಫೋಟೋ ಅಥವಾ ಮಾನಹಾನಿ ಪೋಸ್ಟ್‌ಗಳು ಹೊರಬಾರದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು ಎಂದು ತಿಳಿದುಬಂದಿದೆ.

ಮೇ 3 ನಾಮಪತ್ರ ಸಲ್ಲಿಕೆಗೆ ಕಡೇ ದಿನ | ಖರ್ಗೆಯಿಂದ ಅಂತಿಮ ನಿರ್ಧಾರ

## ರಾಹುಲ್, ಪ್ರಿಯಾಂಕಾ ಸ್ಪರ್ಧೆ ಇಂದು ನಿರ್ಧಾರ ಸಾಧ್ಯತೆ

**ದೆಹಲಿ:** ಗಾಂಧಿ ಕುಟುಂಬದ ಭದ್ರಕೋಟೆ ಕ್ಷೇತ್ರಗಳು ಎನ್ನಿಸಿಕೊಂಡಿದ್ದ ರಾಯ್‌ಬರೇಲಿ ಮತ್ತು ಅಮೇಥಿ ಕ್ಷೇತ್ರಗಳ ಟಿಕೆಟ್ ಹಂಚಿಕೆ ಇನ್ನೂ ಕಗ್ಗಂಟಾಗಿದೆ.

ಈ ಕ್ಷೇತ್ರಗಳಿಂದ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ರಾಹುಲ್ ಗಾಂಧಿ ಸ್ಪರ್ಧೆ ಮಾಡಲಿ ಎಂಬುದು ನಾಯಕರು ಹಾಗೂ ಕಾರ್ಯಕರ್ತರ ಒತ್ತಾಸೆ. ಆದರೆ, ರಾಹುಲ್ ಗಾಂಧಿಯವರ ಅಚಲ ನಿಲುವಿನಿಂದ ಇನ್ನೂ ಗೊಂದಲ ಬಗೆಹರಿದಿಲ್ಲ. ಈ ಎರಡು ಕ್ಷೇತ್ರಗಳ ಬಗ್ಗೆ ಬುಧವಾರ ಮಾತನಾಡಿದ ಕಾಂಗ್ರೆಸ್ ನಾಯಕ ಜೈರಾಂ ರಮೇಶ್, ಇನ್ನು 24ರಿಂದ 30 ಗಂಟೆಗಳಲ್ಲಿ ಅಭ್ಯರ್ಥಿಗಳ ಬಗ್ಗೆ ಘೋಷಣೆಯಾಗಲಿದೆ ಎಂದಿದ್ದಾರೆ. ಅಲ್ಲದೆ ಈ ಕ್ಷೇತ್ರಗಳ ವಿಚಾರದಲ್ಲಿ ಪಕ್ಷದ ಯಾವುದೇ ಕಾರ್ಯಕರ್ತರು ಆತಂಕ ಪಡಬೇಕಾಗಿಲ್ಲ ಎಂದು ಹೇಳಿದ್ದಾರೆ. ಇನ್ನೂ ಮೇ 3ರ ವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿದೆ ಎಂದಿದ್ದಾರೆ.



### ಗೊಂದಲ ಏಕೆ?

ರಾಯ್‌ಬರೇಲಿ, ಸೋನಿಯಾ ಅವರ ಕ್ಷೇತ್ರವಾಗಿದ್ದು, ಇಲ್ಲಿಂದ ಪ್ರಿಯಾಂಕಾ ಕಣಕ್ಕಿಳಿಸಬೇಕು ಎಂಬ ಒತ್ತಡವಿದೆ. ಅಮೇಥಿಯಲ್ಲಿ ಸ್ವತಃ ರಾಹುಲ್ ಕಣಕ್ಕಿಳಿಯಲಿ ಎಂಬ ಆಗ್ರಹವಿದೆ. ಆದರೆ, ಈ ವಿಚಾರದಲ್ಲಿ ರಾಹುಲ್ ಒಪ್ಪುತ್ತಿಲ್ಲ ಎನ್ನಲಾಗಿದೆ. ಇಬ್ಬರೂ ಸ್ಪರ್ಧಿಸಿದರೆ ಬಿಜೆಪಿ ಚುನಾವಣಾ ವಿಷಯವನ್ನಾಗಿ ಮಾಡಿಕೊಳ್ಳುತ್ತದೆ ಎಂಬುದು ರಾಹುಲ್ ಚಿಂತನೆ.

ಮಹಿಳೆಯರಿಗೆ ಕಿರುಕುಳ ಮಾಡಿದವರ ಜತೆ ಬಿಜೆಪಿ ಇರಲ್ಲ
ಒಕ್ಕಲಿಗರ ಪ್ರದೇಶದಲ್ಲಿನ ಮತದಾನ ಬಳಿಕ ಕೇಸ್ ಹೊರಕ್ಕೆ

## ಪ್ರಜ್ವಲ್ ಬಿಟ್ಟಿದ್ದು ಕಾಂಗ್ರೆಸ್ ತಪ್ಪು

**ಹುಬ್ಬಳ್ಳಿ:** ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೊ ಕೇಸ್‌ನಲ್ಲಿ ಕ್ರಮ ತೆಗೆದುಕೊಳ್ಳದೇ ಇದ್ದುದು ನಿಮ್ಮದೇ ತಪ್ಪು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯ ಸರಕಾರದ ವಿರುದ್ಧ ಆರೋಪ ಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಬುಧವಾರ ಆಯೋಜಿಸಿದ್ದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಒಕ್ಕಲಿಗರ ಪ್ರದೇಶದಲ್ಲಿ ಚುನಾವಣೆ ಮುಗಿಯುವವರೆಗೂ ಪ್ರಜ್ವಲ್ ರೇವಣ್ಣ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಈ ವಿಷಯದಲ್ಲಿ ಭಾರಿ ರಾಜಕೀಯ ಮಾಡಿದ್ದೀರಿ. ಅವರನ್ನು ವಿದೇಶಕ್ಕೆ ಹೋಗಲು ಬಿಟ್ಟಿದ್ದೀರಿ. ಧೈರ್ಯವಿದ್ದರೆ ಜನರ ಮುಂದೆ ಸತ್ಯ ಹೇಳಿ. ಇಂಥ ಕೃತ್ಯ ಮಾಡುವವರಿಗೆ ಕಠೋರವಾದ ಶಿಕ್ಷೆಯಾಗಬೇಕು ಎಂಬುದು



ನಾವು ಜೆಡಿಎಸ್ ಜತೆ ಮೈತ್ರಿಯಲ್ಲಿದ್ದೇವೆ. ಈಗ ಪ್ರಜ್ವಲ್ ಕೇಸ್ ಬಂದಿದೆ. ಕಾಂಗ್ರೆಸ್‌ನವರು ಬಿಜೆಪಿಯ ವಿರುದ್ಧ ಹರಿಹಾಯಬಹುದು ಅಂದುಕೊಂಡಿದ್ದಾರೆ. ಆದರೆ, ಮಹಿಳೆಯರ ವಿರುದ್ಧ ದೌರ್ಜನ್ಯವೆಸಗುವ ಯಾರ ಜತೆಯೂ ಬಿಜೆಪಿ ಇರುವುದಿಲ್ಲ.

-ಅಮಿತ್ ಶಾ, ಕೇಂದ್ರ ಸಚಿವ

ಸಿಎಂ ಸಿದ್ದರಾಮಯ್ಯ ಆರೋಪ | ಪಾಸ್‌ಪೋರ್ಟ್, ವೀಸಾ ಕೊಟ್ಟವರು ಯಾರು? | ಅಮಿತ್ ಶಾಗೂ ಸಿಎಂ ತಿರುಗೇಟು

## ದೇವೇಗೌಡರೇ ಪ್ರಜ್ವಲ್ ಕಳಿಸಿದ್ದು

**ಯಾದಗಿರಿ:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರೇ ಪ್ಲಾನ್ ಮಾಡಿ ಸಂಸದ ಪ್ರಜ್ವಲ್ ರೇವಣ್ಣರನ್ನು ವಿದೇಶಕ್ಕೆ ಕಳುಹಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಜಿಲ್ಲೆಯ ಸುರಪುರ ತಾಲೂಕಿನ ದೇವತ್ಕಲ್‌ನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಮಾಜಿ ಪ್ರಧಾನಿ ದೇವೇಗೌಡರ ಕಣ್ಣಿಗೆ ಇದೆಲ್ಲವೂ ಕಾಣಲಿಲ್ಲವೇ? ಪ್ರಜ್ವಲ್ ವಿದೇಶಕ್ಕೆ ಹೋಗುವಾಗ ಯಾರ ಧೈರ್ಯದಿಂದ ಹೋದನು? ಪಾಸ್‌ಪೋರ್ಟ್, ವೀಸಾ ಕೊಟ್ಟವರು ಯಾರು? ಇದೆಲ್ಲವನ್ನೂ ಪ್ಲ್ಯಾನ್ ಮಾಡಿದವರು ದೇವೇಗೌಡರೆ ಎಂದು ದೂರಿದರು. ಇದೇ ಸಂದರ್ಭದಲ್ಲಿ ಎಕ್ಸ್ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧವೂ ಸಿಎಂ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.



ಪ್ರಜ್ವಲ್ ರೇವಣ್ಣ ಪ್ರಕರಣ ಸಂಬಂಧ ಕೊನೆಗಾದರೂ ಮಾತನಾಡಿದ್ದಕ್ಕೆ ಧನ್ಯವಾದಗಳು. ನಮ್ಮ ಮೈತ್ರಿಪಕ್ಷದವರೇ ಮಾಡಿದ್ದರೂ ಮಹಿಳೆಗೆ ಅನ್ಯಾಯ ಮಾಡಿದವರ ಜತೆಗೆ ಇರುವುದಿಲ್ಲ ಎಂದಿದ್ದೀರಿ. ಆದರೆ ಹಿಂದಿನ ಪ್ರಕರಣಗಳನ್ನು ಇದನ್ನು ಪುಷ್ಟೀಕರಿಸುವುದಿಲ್ಲ.

-ಸಿದ್ದರಾಮಯ್ಯ ಸಿಎಂ

ವಿಶ್ವವಾಣಿಗೆ ಸಂಸದ ಉಮೇಶ್ ಜಾಧವ್ ಸಂದರ್ಶನ

## ನೂರಕ್ಕೆ ನೂರು ಗೆಲುವು ನನ್ನದೇ...

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಕಲಬುರಗಿಯಲ್ಲಿ ಈ ಬಾರಿ, ಬಿಜೆಪಿಯ ಡಾ.ಉಮೇಶ್ ಜಾಧವ್ ವಿರುದ್ಧ ಖರ್ಗೆ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರು ಸ್ಪರ್ಧಿಸಿದ್ದಾರೆ. ಇದು ನೇರವಾಗಿ ನನ್ನ ಮತ್ತು ಸಚಿವ ಪ್ರಿಯಾಂಕ್ ಖರ್ಗೆ ಅವರ ನಡುವಿನ ಹಣಾಹಣಿ ಎಂಬುದು ಸಂಸದ ಉಮೇಶ್ ಜಾಧವ್ ಅವರ ಮಾತುಗಳು. ವಿಶ್ವವಾಣಿ ಜತೆಗೆ ಅವರು ಚುನಾವಣೆ ಬಗ್ಗೆ ಮಾತನಾಡಿದ್ದಾರೆ.



- ರಾಧಾಕೃಷ್ಣ ದೊಡ್ಡಮನಿ ಹೆಸರಿಗಷ್ಟೇ ಅಭ್ಯರ್ಥಿ
- ಪ್ರಿಯಾಂಕ್ ಖರ್ಗೆ ಅವರ ಹೆಸರಲ್ಲೇ ಚುನಾವಣೆ
- ನನ್ನನ್ನು ಸೋಲಿಸಲು ಎಐಸಿಸಿ ಅಧ್ಯಕ್ಷರಿಂದಲೇ ಕರೆ
- ಕ್ಷೇತ್ರದಲ್ಲಿ ಬೀಡುಬಿಟ್ಟ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ
- ದೇಶದ ಸುಭದ್ರತೆಗಾಗಿ ಮತ್ತೆ ಬಿಜೆಪಿಗೆ ಜನರ ಆಶೀರ್ವಾದ
- 2ನೇ ಬಾರಿಗೆ ಸ್ಪರ್ಧಿಸಿದ್ದೇನೆ, ಈ ಬಾರಿಯೂ ಗೆಲ್ಲುತ್ತೇನೆ

ವಿಶ್ವವಾಣಿ ಸಂದರ್ಶನ
ದೇವೇಂದ್ರ ಜಾಡಿ

ಪೂರ್ಣ ಸಂದರ್ಶನ → 4

- ಸಚಿವ ಪ್ರಿಯಾಂಕ್ ಖರ್ಗೆ, ನಿಮ್ಮ ನಡುವಿನ ಸಮರ ಚುನಾವಣೆಯಲ್ಲಿ ಯಾವ ರೀತಿಯಾಗಿ ಪರಿಣಾಮ ಬೀರುತ್ತದೆ?

ರಾಧಾಕೃಷ್ಣ ದೊಡ್ಡಮನಿ ಅವರು ಹೆಸರಿಗಷ್ಟೇ ಚುನಾವಣೆಗೆ ನಿಂತಿದ್ದಾರೆ. ಈ ಎಲೆಕ್ಷನ್ ಪ್ರಿಯಾಂಕ್ ಖರ್ಗೆ ಹಾಗೂ ನನ್ನದು. ಕಳೆದ ಚುನಾವಣೆಯ ಸೋಲಿನ ಸೇಡು ತೀರಿಸಿಕೊಳ್ಳಲು ಮಲ್ಲಿಕಾರ್ಜುನ ಖರ್ಗೆ ಅವರು ಸೋಲಿಸಲು ಕರೆ ನೀಡಿದ್ದಾರೆ. ಕಾಂಗ್ರೆಸ್ ನಾಯಕರು ಇಲ್ಲೇ ಬಿಡು ಬಿಟ್ಟಿದ್ದಾರೆ. ಸೋಲಿನ ಭೀತಿ ಶುರುವಾಗಿದೆ. ಶತಯಗತಾಯ ಗೆಲ್ಲಬೇಕು ಎಂದು ಹೆಣಗಾಡುತ್ತಿದ್ದಾರೆ. ಅವರು ಏನೇ ಮಾಡಿದರು ಸಹ ಕಲಬುರಗಿಯಲ್ಲಿ 1.5 ರಿಂದ 2 ಲಕ್ಷ ಅಂತರದಿಂದ ಗೆಲ್ಲುತ್ತೇನೆ.

ಕ್ಯಾಲಿಫೋರ್ನಿಯಾ ವಿವಿಯಲ್ಲಿ ಹಿಂಸೆ | ಪ್ಯಾಲೆಸ್ತೀನ್-ಇಸ್ರೇಲ್ ಪರ ವಿದ್ಯಾರ್ಥಿಗಳ ನಡುವೆ ಘರ್ಷಣೆ

## ಹಿಂಸೆಗೆ ತಿರುಗಿದ ಗಾಜಾ-ಇಸ್ರೇಲ್ ಪ್ರತಿಭಟನೆ!

**ಲಾಸ್ ಏಂಜಲೀಸ್(ಅಮೆರಿಕ):** ಅಮೆರಿಕದ ಕ್ಯಾಂಪಸ್‌ಗಳಲ್ಲಿ ನಡೆಯುತ್ತಿರುವ ಪ್ಯಾಲೆಸ್ತೀನ್ ಪರ ಪ್ರತಿಭಟನೆಗಳು ಹಿಂಸಾತ್ಮಕ ಹಾದಿ ಹಿಡಿದಿವೆ. ಕ್ಯಾಲಿಫೋರ್ನಿಯಾ ವಿವಿಯ ಕ್ಯಾಂಪಸ್‌ನಲ್ಲಿ ಬುಧವಾರ ಪ್ಯಾಲೆಸ್ತೀನ್ ಮತ್ತು ಇಸ್ರೇಲ್ ಪರ ಪ್ರತಿಭಟನಾಕಾರರ ನಡುವೆ ಹಿಂಸಾತ್ಮಕ ಘರ್ಷಣೆ ನಡೆದಿದೆ.

ಅತ್ತ ಕೊಲಂಬಿಯಾ ವಿವಿಯಲ್ಲಿ ಸುಮಾರು 300ಕ್ಕೂ ಹೆಚ್ಚು ಪ್ಯಾಲೆಸ್ತೀನ್ ಪರ ಪ್ರತಿಭಟನಾಕಾರರನ್ನು ನ್ಯೂಯಾರ್ಕ್ ಪೊಲೀಸರು ಬಂಧಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ಅಮೆರಿಕದ ಹಲವಾರು ವಿವಿಗಳಲ್ಲಿ ಈ ರೀತಿ ಪ್ಯಾಲೆಸ್ತೀನ್ ಪರ ಪ್ರತಿಭಟನೆಗಳು ನಡೆಯುತ್ತಿವೆ. ಆರಂಭದಲ್ಲಿ ಕೊಂಚ ತಣ್ಣಗಿದ್ದರೂ, ಈಗ ಇವುಗಳು ಹಿಂಸಾತ್ಮಕ ಮಾರ್ಗ ಹಿಡಿದಿವೆ. ಕ್ಯಾಲಿಫೋರ್ನಿಯಾ ವಿವಿಯಲ್ಲಿ ಪ್ಯಾಲೆಸ್ತೀನ್ ಪ್ರತಿಭಟನಾಕಾರರನ್ನು ಚದುರಿಸಲು ಇಸ್ರೇಲ್ ಪರ ಪ್ರತಿಭಟನಾಕಾರರು ನುಗ್ಗಿದ್ದೇ ಘರ್ಷಣೆಗೆ ಕಾರಣವಾಗಿದೆ. ಇವರು ಮಾರಕಾಸ್ತ್ರಗಳಿಂದ ಹೊಡೆದಾಡಿಕೊಂಡಿದ್ದಾರೆ ಎಂದೂ ವರದಿಯಾಗಿದೆ. ಮಂಗಳವಾರ ಮಧ್ಯರಾತ್ರಿ ಕೆಲವು ಪ್ರತಿಭಟನಾಕಾರರು ಬ್ಯಾರಿಕೇಡ್‌ಗಳನ್ನು ಹತ್ತಿ ದಾಳಿ ಮಾಡಲು ಆರಂಭಿಸಿದ್ದಾರೆ.

→ 8



### ಪ್ರತಿಭಟನೆಗೆ ಕಾರಣಗಳೇನು?

1. ಗಾಜಾ ಮೇಲಿನ ಯುದ್ಧವನ್ನು ನಿಲ್ಲಿಸಬೇಕು
2. ಇಸ್ರೇಲ್ ಪರ ಇರುವ ಕಂಪನಿಗಳ ಜತೆ ಸಂಬಂಧ ಕಡಿದುಕೊಳ್ಳಬೇಕು.
3. ಇಸ್ರೇಲ್ ಕಂಪನಿಗಳ ಮೇಲೆ ಹೂಡಿಕೆ ನಿಲ್ಲಿಸಬೇಕು.
4. ಮಧ್ಯಪ್ರಾಚ್ಯ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಬೇಕು.